ಮತ್ತು ಸಂಗೀತಕ್ಕೂ ವಿಸ್ತರಿಸಿದೆ. ಈ ಪ್ರಕಾರದ ಕ್ಲಾಸಿಕ್‌ಗಳಲ್ಲಿ, ವಿಶೇಷವಾಗಿ Flannery O'Connor ಮತ್ತು Carson McCullers ಜೊತೆಗೆ Faulkner ಕೂಡ ವಿಶೇಷವಾಗಿ ನನಗೆ ಹಿಡಿಸ್ತಾರೆ. Shirley Jackson ಬಹುಶಃ ನನ್ನ ಸಾರ್ವಕಾಲಿಕ ನೆಚ್ಚಿನ ಲೇಖಕಿ. ಆದರೆ Andrew Michael Hurley's Loney ಕೂಡ ಅದ್ಭುತವಾದ ಪುಸ್ತಕ.

**◆ ಉಕ್ರೇನಿನ ಹೊಸ ತಲೆಮಾರಿನ ಕಾವ್ಯದ ವಸ್ತು, ವಿಷಯ, ನಿರೂಪಣಾ ಕ್ರಮ ಹಾಗೂ ಆಶೋತ್ತರಗಳೇನು ?**

ಪ್ರಸ್ತುತ ಉಕ್ರೇನ್‌ನಲ್ಲಿ ಶಕ್ತ ಕವಿ ಪೀಳಿಗೆಯಿದ್ದು, ಮತ್ತದು ಸಮರ್ಥವಾಗಿ ಕೆಲಸ ಮಾಡುತ್ತಿರುವುದು ನಮ್ಮ ಸೌಭಾಗ್ಯ ಅಂತ ನನಗನಿಸುತ್ತೆ. ಕಳೆದ ವರ್ಷ, ನನ್ನ ಸಹೋದ್ಯೋಗಿಯ ಜೊತೆ ಸೇರಿ ನನಗೆ ಇಷ್ಟವಾದ ಉಕ್ರೇನಿಯನ್ ಕವಿ Ostap Slyvynsky ಅವರ ಪುಸ್ತಕವನ್ನು ಇಂಗ್ಲಿಷ್‌ಗೆ ಅನುವಾದಿಸಿದ್ದೆ. ಅದು ಅಮೆರಿಕದ ಲಾಸ್ಟ್ ಹಾರ್ಸ್ ಪ್ರೆಸ್‌ನಿಂದ "Winter King" ಎಂಬ ಹೆಸರಿನಲ್ಲಿ ಪ್ರಕಟವಾಯಿತು. Slyvynsky ಅವರ ಕಾವ್ಯ ಬಲು ನಾಜೂಕು, ಕನಸಿನಂತಹದ್ದು. ಜೊತೆ ಜೊತೆಗೆ ಬಹಳ ಸ್ಪಷ್ಟತೆಯಿಂದ ಕೂಡಿದ್ದಾಗಿದೆ. ನಮ್ಮಲ್ಲಿ ಕೆಲವು ಅದ್ಭುತ ಕವಯಿತ್ರಿಯರೂ ಇದ್ದಾರೆ. ಮತ್ತವರನ್ನು ಇಂದಿನ ಉಕ್ರೇನಿಯನ್ ಸಾಹಿತ್ಯದ ಬಹುಶಃ ಅತ್ಯಂತ ಗಟ್ಟಿ ಕಾಳುಗಳೆನ್ನಬಹುದು. ಇವುಗಳಲ್ಲಿ Halyna Kruk, Marianna Kiyanovska, Oksana Lutsyshyna (ಈಕೆ ಒಬ್ಬ ಅದ್ಭುತ ಕಾದಂಬರಿಕಾರ್ತಿ ಕೂಡ) ಮತ್ತಿತರರು ಸೇರಿದ್ದಾರೆ. ಉಕ್ರೇನಿಯನ್ ಕಾವ್ಯದ ಬೆಳವಣಿಗೆಯು, ಶತಮಾನಗಳಿಂದ ರಷಿಯನ್ ವಸಹಾತುಶಾಹಿ ಆಡಳಿತದಲ್ಲಿ, ಮೊದಲಿಗೆ ರಷಿಯನ್ ಸಾಮ್ರಾಜ್ಯದ ಭಾಗವಾಗಿ, ಆ ನಂತರದಲ್ಲಿ ರುಸೋ ಕೇಂದ್ರಿತ ಚೌಕಟ್ಟಿನ ಸೋವಿಯತ್ ಪ್ರಭುತ್ವದ ಭಾಗವಾಗಿ ಕುಂಠಿತಗೊಂಡಿತ್ತು.

ಉಕ್ರೇನಿಯನ್ ಕಾವ್ಯದ ಶೈಲಿ, ವಸ್ತು ವಿಷಯಗಳು ವೈವಿಧ್ಯಮಯವಾಗಿರುವುದಕ್ಕೆ ದಶಕಗಳ ಈ ಸಾಂಸ್ಕೃತಿಕ ದಬ್ಬಾಳಿಕೆ ಮತ್ತು ಸೆನ್ಸಾರ್‌ಶಿಪ್ ಅನ್ನು ಮೀರಿ ಪ್ರಸ್ತುತ ಯುವ ಪೀಳಿಗೆಯು ಅರಳಿ ನಿಂತಿರುವುದೇ ಕಾರಣವಿರಬಹುದು. ದೇಶದ ಸ್ವಾತಂತ್ರ್ಯದ ನಂತರ ಆ ಕೂಡಿಟ್ಟ ಒಳಗಿನ ಸತ್ವ ಮತ್ತು ವೈವಿಧ್ಯತೆ ಜೀವಂತವಾಗಿ ಹೊರಹೊಮ್ಮಿತು. ಈಗ ಖಂಡಿತವಾಗಿ, ರಶಿಯಾ ಈ ಪ್ರಕ್ರಿಯೆಯನ್ನು ಮತ್ತೆ ಹಿಂದಕ್ಕೆ ತಿರುಗಿಸಲು ಪ್ರಯತ್ನಿಸುತ್ತಿದೆ. ಭಯಾನಕ ಹಿಂಸಾತ್ಮಕ ಮತ್ತು ಅಮಾನವೀಯ ರೀತಿಯಲ್ಲಿ ಉಕ್ರೇನಿನಲ್ಲಿ ರಾಜಕೀಯ ಮತ್ತು ಸಾಂಸ್ಕೃತಿಕ ಪ್ರಭುತ್ವವನ್ನು ಸ್ಥಾಪಿಸಲು ಪ್ರಯತ್ನಿಸುತ್ತಿದೆ. ಆದರೂ, ಉಕ್ರೇನಿಯನ್ ಸಂಸ್ಕೃತಿಗೆ ಪುಟಿದೇಳುವ ಚೈತನ್ಯವಿದೆ. ನಾವು ಈ ಸವಾಲನ್ನು ಸಹ ನಿಭಾಯಿಸುತ್ತೇವೆ.

**◆ ಉಕ್ರೇನ್‌ನಲ್ಲಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಸ್ವರೂಪ ಹೇಗಿದೆ?**

ಉಕ್ರೇನಿನ ಸರ್ಕಾರಿ ಶಾಲೆಗಳಲ್ಲಿ ಎಲ್ಲಾ ಮಕ್ಕಳಿಗೂ ಮಾಧ್ಯಮಿಕ ಶಾಲೆಯವರೆಗೆ ಉಚಿತ ಶಿಕ್ಷಣ ಸಿಗುತ್ತದೆ. ಖಾಸಗಿ ಶಾಲೆಗಳು ಕೂಡ ಇವೆ. ಕೆಲವು ಶಾಲೆಗಳು ರಾಷ್ಟ್ರೀಯ ಪಠ್ಯಕ್ರಮವನ್ನು ಅನುಸರಿಸುತ್ತವೆ, ಕೆಲವು ಪರ್ಯಾಯ ಕಲಿಕಾ ವಿಧಾನಗಳನ್ನು ಅಳವಡಿಸಿಕೊಂಡಿವೆ ಅಥವಾ ನಿರ್ದಿಷ್ಟ ವಿಷಯಗಳಲ್ಲಿ ಹೆಚ್ಚಿನ ಕಲಿಕಾ ತಜ್ಞತೆಯನ್ನು ಹೊಂದಿರುತ್ತವೆ. ಎಲ್ಲಾ ಮಕ್ಕಳೂ ಕನಿಷ್ಠ 9ನೇ ತರಗತಿಯವರೆಗೆ ಕಡ್ಡಾಯವಾಗಿ ಶಿಕ್ಷಣವನ್ನು ಪಡೆಯಬೇಕು. ಅದರ ನಂತರ ಅವರು ಕೆಲಸಕ್ಕೆ ಹೋಗಬಹುದು ಅಥವಾ ವೃತ್ತಿಪರ ತರಬೇತಿಗಳಿಗೆ ಸೇರಬಹುದು. ಆದರೆ ವಿಶ್ವವಿದ್ಯಾಲಯಕ್ಕೆ ಪ್ರವೇಶ ಪಡೆಯಬೇಕೆಂದರೆ ಹನ್ನೆರಡು ವರ್ಷಗಳ ಮಾಧ್ಯಮಿಕ ಶಿಕ್ಷಣವನ್ನು ಪೂರ್ಣಗೊಳಿಸಿರಬೇಕಾಗುತ್ತದೆ.

ಶಿಕ್ಷಣ ವಲಯದಲ್ಲಿನ ಮುಖ್ಯ ಸಮಸ್ಯೆಗಳ ಬಗ್ಗೆ ಹೇಳೋದಾದರೆ ಹಣಕಾಸಿನ ಕೊರತೆ. ಇದರಲ್ಲಿ ಶಿಕ್ಷಕರಿಗೆ ಕಡಿಮೆ ವೇತನ ಮತ್ತು ಶಾಲಾ ಆಸ್ತಿಯನ್ನು ಸರಿಯಾಗಿ ನಿರ್ವಹಿಸದಿರುವುದು; ಗ್ರಾಮೀಣ ಪ್ರದೇಶಗಳಲ್ಲಿ ಸಿಬ್ಬಂದಿ ಕೊರತೆ; ಹಳತಾದ ರಾಷ್ಟ್ರೀಯ ಪಠ್ಯಕ್ರಮವನ್ನು ನವೀಕರಿಸುವ ಮತ್ತು ಸುಧಾರಿಸುವ ಅಗತ್ಯ; ಮತ್ತು ಉತ್ತಮ ಶಿಕ್ಷಕರ ತರಬೇತಿ, ಬೋಧನಾ ಉದ್ಯೋಗದಲ್ಲಿ ಗುಣಮಟ್ಟದ ನಿಯಂತ್ರಣದ ಅಗತ್ಯ ಹೀಗೆ ಮುಂದುವರಿಯುತ್ತೆ...

●